Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 2/2014

ಫ್ರಾ.ಸಾ. 6 ಚಾ.ಸಾ. 15

| | | |
|---|---|---|
| ಹೆಸರು | : | ಕವಿತಾ ಎಸ್. ಮನ್ನಿಕೇರಿ |
| ಗಂಡನ ಹೆಸರು | : | ಮಲ್ಲಿಕಾರ್ಜುನಗೌಡ ಪಾಟೀಲ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಆಯಕ್ತರು ಕರ್ನಾಟಕ ಗೃಹ ಮಂಡಳಿ ಬೆಂಗಳೂರು |
| ವಾಸ | : | ಬೆಂಗಳೂರು |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-02-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 19-12-2009 ರಿಂದ 21-10-2011ರ ವರೆಗೆ ಯಾದಗಿರಿಯಲ್ಲಿ ಸಹಾಯಕ ಆಯುಕ್ತಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. 2ನೇ ಆರೋಪಿ ಆಗ ಹಸನಾಪೂರದ ಗ್ರಾಮಲೆಖಿಗನಾಗಿ ಕೆಲಸ ಮಾಡುತ್ತಿದ್ದ. ಮೃತ 1ನೇ ಆರೋಪಿ ಗುರುಪಾದಪ್ಪ ಪಾಟೀಲ ನಮ್ಮ ಕಛೇರಿಯಲ್ಲಿ ಮ್ಯಾನೇಜರ ಆಗಿದ್ದರು. ಸಹಾಯಕ ಆಯುಕ್ತರ ವ್ಯಾಪ್ತಿಗೆ ಬರುವ ಎಲ್ಲ ಕೆಲಸಗಳನ್ನು ಮೃತ 1ನೇ ಆರೋಪಿ ಗುರುಪಾದಪ್ಪ ಪಾಟೀಲ ಮಾಡುತ್ತಿದ್ದರು. ನಮ್ಮ ಕಛೇರಿಯಿಂದ ಯಾವುದಾದರೂ ಪತ್ರ ವ್ಯವಹಾರ ಇದ್ದಲ್ಲಿ ಅವುಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ನಾವು ವರದಿಯನ್ನು ಸಹಿ ಮಾಡಿದ ನಂತರ ಮ್ಯಾನೇಜರ ಅವರು ವರದಿಯನ್ನು ಪತ್ರದ ಮುಖೇನ ಸಂಬಂಧಪಟ್ಟ ಕಛೇರಿಗೆ ಕಳುಹಿಸುತ್ತಿದ್ದರು. ಶಿವಶಂಕರ ಎನ್ನುವವರು ಡಿ.ಸಿ. ಕಛೇರಿಗೆ ಸರ್ವೆ ನಂ. 46/1/2, ಹಸನಾಪೂರ ಗ್ರಾಮದ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಅರ್ಜಿ ಸಲ್ಲಿಸಿದ್ದರು. ಜಿಲ್ಲಾಧಿಕಾರಿ ಕಛೇರಿಯಿಂದ ನಮಗೆ ಸ್ಥಳ ತನಿಖೆ ಮಾಡಿ ವರದಿ ಕೊಡುವಂತೆ ಪತ್ರ ಬಂದಿತ್ತು. ನಾನು ಮತ್ತು ಮೃತ 1ನೇ ಆರೋಪಿ ಗುರುಪಾದಪ್ಪ ಪಾಟೀಲ ದಿಃ 26.10.2010 ರಂದು ಸ್ಥಳ ತನಿಖೆ ಮಾಡಿದ್ದು ವರದಿ ತಯಾರಿಸಿ ಕೊಡುವಂತೆ ಮ್ಯಾನೇಜರ ಅವರಿಗೆ ಹೇಳಿದ್ದೆ. ದಿಃ 30.10.2010 ರಂದು ಆ ಕಡತವನ್ನು ನನ್ನ ಮುಂದೆ ಸಲ್ಲಿಸಿದ್ದರು ಅದಕ್ಕೆ ನಾನು ಸಹಿ ಮಾಡಿಕೊಟ್ಟಿರುತ್ತೇನೆ. ಆ ವರದಿಯನ್ನು ಡಿ.ಸಿ. ಅವರ ಕಛೇರಿಗೆ ಮೃತ 1ನೇ ಆರೋಪಿ ಮತ್ತು ಇತರೆ ಸಿಬ್ಬಂದಿಗಳು ಕಳುಹಿಸಿಕೊಡಬೇಕ್ಕಿತ್ತು.

25,000/- ರೂ ಎನ್.ಎ. ಕಡತವನ್ನು ಡಿ.ಸಿ. ಅವರ ಕಛೇರಿಗೆ ಕಳುಹಿಸಲು 1ನೇ ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಎಂದು ಲೋಕಾಯುಕ್ತ ಪೊಲೀಸರಿಂದ ಗೊತ್ತಾಯಿತು. ಈಗ ನನಗೆ ತೋರಿಸಿದ ವರದಿಯನ್ನು ನಾನು ತಯಾರಿಸಿದ್ದು ಅದನ್ನು ನಿ.ಪಿ.31 ಮತ್ತು ನಿ.ಪಿ.32 ಎಂದು ಗುರುತಿಸಲಾಯಿತು. ಅದರ ಜೊತೆ ಕವರಿಂಗ ಪತ್ರವನ್ನು ನನ್ನ ನಂತರ ಬಂದ ಸಹಾಯಕ ಆಯುಕ್ತರು ಕಳುಹಿಸಿಕೊಟ್ಟಿದ್ದಾರೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ</u>

3. ಸ್ಥಳ ತನಿಖೆ ಮಾಡಿದ ನಂತರ ವರದಿ ತಯಾರಿಸುವದು ಮೃತ 1ನೇ ಆರೋಪಿಯ ಕೆಲಸವಾಗಿದ್ದು 2ನೇ ಆರೋಪಿಯ ಪಾತ್ರ ಯಾವುದೇ ಇರುವುದಿಲ್ಲ ಎಂದರೆ ಸರಿ. ಎನ್.ಎ. ಮಾಡುವಾಗ ಸರಕಾರಕ್ಕೆ ಶುಲ್ಕ ಕಟ್ಟಬೇಕು ಎಂದರೆ ಡಿ.ಸಿ. ಅವರ ಕಛೇರಿಯಲ್ಲಿ ಕಟ್ಟಬೇಕು. ಸಾಮಾನ್ಯವಾಗಿ ಏನೇನು ಶುಲ್ಕ ಕಟ್ಟಬೇಕು ಎಂದು ಆ ಕಛೇರಿಗಳ ಸಿಬ್ಬಂದಿಗಳು ಸಾರ್ವಜನಿಕರಿಗೆ ಹೇಳುತ್ತಾರೆ ಎಂದರೆ ಸರಿ. ಶುಲ್ಕದ ಹಣ ಲಂಚ ಆಗುವುದಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಲೋಕಾಯುಕ್ತರು ಹೇಳಿದ್ದರಿಂದ ಮಾತ್ರ ನನಗೆ ಗೊತ್ತಾಯಿತು ಎಂದರೆ ಸರಿ. 1ನೇ ಆರೋಪಿಯ ಬಳಿ ನಾನು ಸಹಿ ಮಾಡಿದ ವರದಿ ಯಾವ ದಿನಾಂಕದಂದು ಹೋಯಿತು ಎಂದು ಗೊತ್ತಿಲ್ಲ. ನಾನು ದಿಃ 30.10.2010 ರಂದು ಸಹಿ ಮಾಡಿರುತ್ತೇನೆ. ಸ್ಥಳ ಪರಿಶೀಲನೆ ಬಿಟ್ಟರೆ ಗ್ರಾಮಲೆಖಿಗರಿಗೆ ನಂತರದಲ್ಲಿ ಯಾವುದೇ ಕೆಲಸ ಇರುವುದಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.